**PW_4**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ಚಿತ್ರದುರ್ಗ**

**ಸಿ.ಸಿ. 1649/2022**

| | | |
|---|---|---|
| ಸಾಕ್ಷಿದಾರರ ಹೆಸರು | - ಗಿರಿಜಮ್ಮ | PW:4 |
| ಗಂಡನ ಹೆಸರು | - ತೋಟಪ್ಪ | CW:5 |
| ವಯಸ್ಸು | - 73 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - ನಿವೃತ್ತ ಶಿಕ್ಷಕಿ | ದಿ: 28/02/2025 |
| ವಾಸ | - ಹೂವಿನ ಹಡಗಲಿ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. 1 ನೇ ಆರೋಪಿ ನನ್ನ ತಮ್ಮ , 2 ನೇ ಆರೋಪಿ ನನ್ನ ನಾದಿನಿ. ಚಾಸಾ.1 ಮತ್ತು 4 ನನ್ನ ತಂಗಿಯರು. ಆರೊಪಿ ಮತ್ತು ಚಾಸಾ.1 ಮತ್ತು 4 ರವರು ಚಿತ್ರದುರ್ಗದ ಜೋಗಿಮಟ್ಟಿ ರಸ್ತೆಯಲ್ಲಿ ಮಾಸ್ತಮ್ಮ ದೇವಸ್ತಾನದ ಮುಂದೆ ಒಂದೇ ಕಾಂಪೌಂಡ್ ನಲ್ಲಿ ವಾಸವಾಗಿರುತ್ತೇವೆ. ನಮ್ಮ ಮುಂದಿನ ಕಾಂಪೌಂಡನ ಗೇಟ ನ್ನು ತೆಗೆದುಕೊಂಡು ಬರುತಿದ್ದರು ನಾವುಗಳು ಆ ಗೇಟನ್ನು ಅಂಗೆ ತೆಗೆದುಕೊಂಡು ಬರಬೇಡಿ ಹಾಕಿಕೊಂಡು ಹೋಗಿ ಅಂತ ಹೇಳುತಿದ್ದೆವು ಅದಕ್ಕೆ ಗೇಟನ್ನು ಆಗಲೆ ಅಂಗೆ ತೆಗೆದುಕೊಂಡು ಬರುತ್ತಾ ಇದ್ದರು ನನ್ನ ತಂಗಿ ಮೀನಾಕ್ಷಿ ಕಸ ಗುಡಿಸುವಾಗ ಆ ಸ್ಥಳದಲ್ಲಿ ಆರೋಪಿತರು ಬೈಕ್ ನಿಲ್ಲಿಸಿದ್ದರು ಆ ಬೈಕನ್ನು ಆ ಕಡೆ ತೆಗೆದು ನಿಲ್ಲಿಸಿರಿ ಅಂತ ಹೇಳಿದ್ದಕ್ಕೆ ಆರೋಪಿತರು ನನ್ನ ತಂಗಿಯ ಮೇಲೆ ಗಲಾಟೆ ಮಾಡಿ ಅವಾಚ ಶಬ್ದಗಳಿಂದ ಬೈದಾಡಿದರು.ಹಿಡಿದೆಳೆದಾಡಿ ಹೊಡೆದರು. ನಂತರದಲ್ಲಿ ಅವಳಿಗೆ ಕಿವಿಗೆ ಹೊಡೆತ ಬಿದ್ದಿದ್ದರಿಂದ ನಂತರ ಚಾಸಾ.1 ರವರನ್ನು ನನ್ನ ಇನ್ನೊಬ್ಬ ಸಹೋದರಿ ಆಸ್ಪತ್ರೆಗೆ ಕರೆದುಕೊಂಡು ಚಿಕಿತ್ಸೆಗೆ ಹೋದರು. ನಂತರ ಈ ವಿಚಾರವಾಗಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತೇನೆ ಆ ವಿಚಾರ ಗೊತ್ತು. ಆಸ್ತಿಯ ವಿಚಾರವಾಗಿ ತುಂಬಾ

ವರ್ಷದಿಂದ ಆರೋಪಿತರು ಬಹಳ ವರ್ಷಗಳಿಂದ ಅವಾಚ್ಯ ಶಬ್ದಗಳಿಂದ ಬೈದು ಹಿಂಸೆ ಕೊಟ್ಟಿರುತ್ತಾರೆ. ಒಂದು ದಿನ ಮನೆಯಲ್ಲಿ ಕೂಡ ಕೂಡಿ ಹಾಕಿದ್ದರು.

**( ಈ ಹಂತದಲ್ಲಿ ಸ.ಸ. ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು : ಸ.ಸ. ಅಭಿಯೋಜಕರಿಂದ</u>**

2. ಆರೋಪಿತರು ನನ್ನ ತಂಗಿ ರುದ್ರಮ್ಮಳನ್ನು ಹಿಡಿದೆಳೆದಾಡಿ ಕೈಕಾಲುಗಳಿಂದ ಮೈಕೈ ಗೆ ಗುದ್ದಿದ್ದರು ಎಂದರೆ ಸರಿಯಲ್ಲ. ಎಳೆದಾಡಿರುತ್ತಾರೆ. ಆ ಸಮಯದಲ್ಲಿ ಆರೋಪಿತರು ನಿಮ್ಮನ್ನು ಸಾಯಿಸಿಬಿಡುತ್ತೇವೆ ಅಂತ ಪ್ರಾಣ ಬೆದರಿಕೆ ಹಾಕಿರುತ್ತಾರೆ.

**<u>ಪಾಟೀ ಸವಾಲು ಆರೋಪಿಯ ಪರ ಶ್ರೀ ಬಿ ಕೆ ಎಂ ವಕೀಲರಿಂದಃ</u>**

3. ಮನೆ ವಿಚಾರವಾಗಿ ಗಲಾಟೆ ಆಯಿತು ಅಂತ ಹೇಳಿದ ಮನೆ ನನ್ನ ತಂದೆಗೆ ಸೇರಿದ್ದಾಗಿರುತ್ತದೆ ಎಂದರೆ ಹೌದು. ಅದು ಪಿತ್ರಾರ್ಜಿತ ಆಸ್ತಿ ಎಂದು ಹೇಳುತ್ತಾರೆ. ಆ ಮನೆ ವಿಚಾರವಾಗಿ ಓ ಎಸ್.288/2016 ಪಾಲು ವಿಬಾಗಕ್ಕೆ ದಾವೆ ನಡೆಯುತ್ತಿದೆ ಎಂದರೆ ಹೌದು. ಆ ಕೇಸ್ ನಲ್ಲಿ ನನಗೆ ಮತ್ತು ರವಿಕುಮಾರ್ ರವರಿಗೂ ನೋಟೀಸ್ ಬಂದಿದೆ ಎಂದರೆ ಹೌದು. ಮನೆ ವಿಚಾರವಾಗಿ ಜಾಗ ಬಿಟ್ಟು ಕೊಡಿ ಅಂತ ಗಲಾಟೆ ನಡೆಯುತ್ತಾ ಇದೆ ಎಂದರೆ ಹೌದು. 4 ಗುಂಟೆ ಜಾಗದಲ್ಲಿ ಬಾಗ ಕೊಡಲ್ಲ ಅಂತ ನಾನು ಹೇಳಿರುತ್ತೇನೆ ಎಂದರೆ ಹೌದು. ಆಗಿನಿಂದ ನಮಗೂ ಮತ್ತು ನನ್ನ ಅಕ್ಕತಂಗಿಯರಿಗೂ ರವಿಕುಮಾರ್ ಮೇಲೆ ದ್ವೇಷ , ಮನಸ್ತಾಪ ಎಂದರೆ ಹೌದು. ಗಲಾಟೆ ಆಗಿದ್ದು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಮನೆಯ ಒಳಗಡೆ ಇದ್ದೆ ಗಲಾಟೆ ಶುರು ಆದ ನಂತರ ಬಂದು ನೋಡಿ ಬಿಡಿಸಿರುತ್ತೇನೆ. ಆದರೆ ಸುದಾರಿಸಲು ಆಗಲಿಲ್ಲ. ಕಸ ಹೊಡೆಯುವಾಗ ಗಲಾಟೆ ಆಗಿರುತ್ತದೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆ

**PW_**4

ಗಲಾಟೆಯಲ್ಲಿ ಮೀನಾಕ್ಷಮ್ಮರವರಿಗೆ ಕಿವಿಗೆ ಹೊಡೆತ ಬಿತ್ತು ಎಚ್ಚರ ತಪ್ಪಿರುತ್ತದೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿರುತ್ತೇವೆ. ಮನೆಯಲ್ಲಿ ನನಗೂ, ರುದ್ರಮ್ಮ ಮತ್ತು ಮೀನಾಕ್ಷಮ್ಮರವರಿಗೆ ಕೂಡಿ ಹಾಕಿರುತ್ತಾರೆ. ಈ ವಿಚಾರವಾಗಿ ಕೂಡಿಹಾಕಿದ್ದರು ಅಂತ ಪೊಲೀಸರಿಗೆ ಹೇಳಿಕೆ ಹೇಳಿರುತ್ತೇನೆ. ಪೊಲೀಸರು ಆ ವಿಚಾರ ಎಲ್ಲಾ ಬರೆದುಕೊಂಡಿದ್ದಾರಾ ಎಂದರೆ ಹೌದು. ರವಿಕುಮಾರ್ ಗೆ ಮನೆಯಲ್ಲಿ ಬಾಗ ಕೊಡಬಾರದು ಅನ್ನುವ ವಿಚಾರಕ್ಕೆ ನಾನು ಮತ್ತು ಅಕ್ಕತಂಗಿಯರು ಸೇರಿ ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ರವಿಕುಮಾರ್ ಗೆ ದಾವೆಯಲ್ಲಿ ಹಾಜರಾಗಲು ಅವಕಾಶ ಕೊಟ್ಟಿಲ್ಲ ತಡೆಹಿಡಿದಿರುತ್ತೇವೆ ಎಂದರೆ ಸರಿಯಲ್ಲ. ಅನಿಲ್ ಕುಮಾರ್ ಮಾಡುತಿದ್ದ ಗಲಾಟೆ ನೋಡಿರುತ್ತೇನೆ , ತಡೆದಿರುತ್ತೇನೆ ಮತ್ತು ಬಿಡಿಸಿರುತ್ತೇನೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಗಲಾಟೆ ನೀವು ಬಿಡಿಸಿದ್ದಿರಾ ಎಂದರೆ ಹೋಗಿರುತ್ತೇನೆ ಆದರೆ ಅವರಿಗೆ ತಡೆಯಲು ಆಗಲಿಲ್ಲ. ನನ ತಮ್ಮ ಮತ್ತು ಆತನ ಹೆಂಡತಿ ರವಿಕುಮಾರ್ ಸಹಾಯ ಮಾಡಲು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**